"ಇದು ಬರೀ ಕೈಗಡಿಯಾರವಲ್ಲ, ನಮ್ಮ ಬಾಳಿನ ನವ ನವೋದಯವನ್ನು ಸೂಚಿಸುವ ಕ್ಷಣದ ಸಂಕೇತ" ಎಂದೆಲ್ಲಾ ಕಮಲಜ್ಜಿ, ಮತ್ತೆ ಆ ಕೈಗಡಿಯಾರವನ್ನು ಸ್ಪರ್ಶಿಸಿದಳು, ತನ್ನವರ ಕೈಯನ್ನೇ ಹಿತವಾಗಿ ಸ್ಪರ್ಶಿಸಿದಂತಾಗಿ ಕಣ್ಣಲ್ಲಿ ಮುಗಿಯದ ಬೆಳಕೊಂದು ಹನಿಗಳಲ್ಲಿ ಉದಯಿಸಿತು.

ಕಮಲಜ್ಜಿಯನ್ನೇ ಅಷ್ಟೊತ್ತು ನೋಡುತ್ತಿದ್ದ ಅಂತು, "ಎಂಥಾ ಅಜ್ಜಿ ನೀ ಅಳೋದು? ಮಳೆ ಅತ್ತಂತೆ ಅಳ್ತಿಯಲ್ಲ'' ಎಂದು ನಕ್ಕ. 'ಈ ಹುಡುಗನಿಗೆ ಹೇಗೆ ಹೇಳೋದು ಪಾಪ' ಎಂದು ಕಮಲಜ್ಜಿ ಆ ಕೈಗಡಿಯಾರದ ಮುಳ್ಳನ್ನೇ ನೋಡುತ್ತಾ ಮೌನವಾದಳು. ಅವಳಿಗೆ ಆ ಕೈಗಡಿಯಾರವನ್ನು ಅಂತು ಮನೆಗೆ ಯಾರು ಕೊಟ್ಟರು? ಹೇಗೆ ಹೋಯಿತು? ಎನ್ನುವ ಪ್ರಶ್ನೆಯೇ ಕೊರೆಯುತ್ತಿತ್ತು. ಇಷ್ಟು ದಿನ ಆ ಕೈಗಡಿಯಾರದ ನೆನಪೇ ತನಗಾಗದ್ದಕ್ಕೆ ಅವಳು ಒಳಗೊಳಗೆ ಬೇಸರದಿಂದ ತತ್ತರಿಸಿದಳು. ಕಮಲಜ್ಜಿ ಹುಡುಗನಿಗೆ ಏನು ಹೇಳಬೇಕು ಎಂದು ತಿಳಿಯಲಿಲ್ಲವಾದರೂ, "ಈ ವಾಚ್ ನಿಂಗೆ ಅಪ್ಪ ಕೊಟ್ರಾ, ನಿಂಗೇ ಅಂತ್ಲೇ ಕೊಟ್ರಾ" ಅಂದಳು.

"ಯಾರೂ ಕೊಡ್ಲಿಲ್ಲ. ಮನೇಲಿ ಎಲ್ಲೋ ಇತ್ತು. ಹಿಡ್ಕೊಂಡ್ ಬಂದೆ. ಈ ವಾಚು, ಯಾರೂ ಹಾಕುದಿಲ್ಲ," ಎಂದ ಅಂತು.

ಕಮಲಜ್ಜಿಗೆ ಜೀವ ಬಂದಂತಾಯಿತು. "ಅಂತು, ಅದು ದೊಡ್ಡ ಗಂಡಸರು ಹಾಕುವ ವಾಚು, ನೀನು ಈಗ ಹಾಕಿದ್ರೆ ಎಲ್ರೂ ನಿನ್ನನ್ನು ನೋಡಿ ನಗಾಡ್ತಾರೆ. ಚೂರು ದೊಡ್ಡವನಾಗು, ಆ ಮೇಲೆ

